ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| ಮುಖಕ್ಷೌರ ಅರ್ಧಕ್ಷೌರ | 2 |
| ಕೂದಲನ್ನು ಪೂರ್ಣ ತೆಗೆಸುವದರಿಂದ ಪಾಪನಾಶ | 3 |
| ಮುಖಕ್ಷೌರ-ಅರ್ಧಕ್ಷೌರಗಳು | 7 |
| ನಿಯಮಗಳು | 11 |
| ವಿಕೃತ ಕ್ಷೌರ ಸಲ್ಲದು | 12 |
| ಕ್ಷೌರದ ಕುರಿತ ಇತರ ಲೇಖನಗಳು | 14 |

## ಮುಖಕ್ಷೌರ ಅರ್ಧಕ್ಷೌರ

ಶಿಖೆಯ ಭಾಗವನ್ನು ಮಾತ್ರ ಉಳಿಸಿ, ತಲೆಯ ಮೇಲಿನ ಎಲ್ಲ ಕೂದಲನ್ನೂ ಪೂರ್ಣ ತೆಗೆಸಬೇಕು, ಬೋಳಿಸಬೇಕು ಎನ್ನುವದು ಶಾಸ್ತ್ರೀಯವಾದ ಕ್ರಮ.

ಕಳೆದ ಶತಮಾನದವರೆಗೆ ಈ ಶಿಖೆಯನ್ನು ಶೂದ್ರರನ್ನು ಹೊರತು ಪಡಿಸಿ ಎಲ್ಲರೂ ಬಿಡುತ್ತಿದ್ದರು, ಅಧ್ಯಾತ್ಮ ಸಾಧನೆಯನ್ನು ಮಾಡುತ್ತಿದ್ದ ಸಚ್ಛೂದ್ರರೂ ಸಹ ಬಿಡುತ್ತಿದ್ದರು.

ಆದರೆ ಪಾಶ್ಚಾತ್ಯರ ಪ್ರಭಾವದಿಂದ, ಕಳೆದ ಒಂದು ಶತಮಾನದಲ್ಲಿ ಎಲ್ಲವೂ ಬದಲಾಗಿದೆ.

ಶಿಖೆಯನ್ನು ಬಿಡದೆ, ತಲೆಗೂದಲನ್ನು ಪೂರ್ಣ ತೆಗೆಸದೇ ಸೌಂದರ್ಯಕ್ಕೆ ಎಷ್ಟು ಬೇಕೋ ಅಷ್ಟು ಕೂದಲನ್ನುಳಿಸಿಕೊಂಡು, ಹೆಚ್ಚಾಗಿ ಬೆಳೆದ ಕೂದಲನ್ನು ತೆಗೆಸುವ ಕ್ರಮ ಈಗ ಹೆಚ್ಚು ಚಾಲ್ತಿಯಲ್ಲಿದೆ.

ಕೆಲವರು ಶಿಖೆಯನ್ನು ಬಿಟ್ಟಿರುತ್ತಾರೆ, ಆದರೆ ಕೂದಲನ್ನು ಪೂರ್ಣ ತೆಗೆಸದೇ ಅರ್ಧ ತೆಗೆಸುತ್ತಾರೆ. ಶಾಸ್ತ್ರದಲ್ಲಿ  ಬ್ರಾಹ್ಮಣರಿಗೆ ಕೇವಲ ಮುಖಕ್ಷೌರದ ಪದ್ಧತಿ ಇಲ್ಲವೇ ಇಲ್ಲ. ಆದರೆ, ಇವತ್ತು ಮುಖಕ್ಷೌರ ಅತ್ಯಂತ ಸಾಮಾನ್ಯವಾಗಿದೆ.

ಈ ಪದ್ಧತಿಗಳ ಸರಿ-ತಪ್ಪುಗಳ ಕುರಿತು, ಆವಶ್ಯಕತೆ, ಅನಿವಾರ್ಯತೆಗಳ ಕುರಿತು ವಿವರವಾಗಿ ಈಗ ತಿಳಿಯೋಣ.

## ಕೂದಲನ್ನು ಪೂರ್ಣ ತೆಗೆಸುವದರಿಂದ ಪಾಪನಾಶ

ತಲೆಗೂದಲನ್ನು ಪೂರ್ಣ ಬೋಳಿಸದೇ ಕತ್ತರಿಸಿಕೊಳ್ಳುವದನ್ನೇ ಇವತ್ತು ಎಲ್ಲರೂ ಅನುಸರಿಸುತ್ತಿದ್ದಾರೆ. ಅದು ಶಾಸ್ತ್ರೀಯವಲ್ಲ ಎಂದು ತಿಳಿದೆವು.

ಆದರೆ ಏನು ಮಾಡುವದು, ಕೂದಲು ಸೌಂದರ್ಯದ ಸಂಕೇತವಾಗಿದೆ. ಅದನ್ನು ಉಳಿಸಿಕೊಳ್ಳಲು ಎಲ್ಲರೂ ಪ್ರಯತ್ನ ಪಡುತ್ತಾರೆ. ಒಪ್ಪವಾಗಿಡಲು ಇಷ್ಟ ಪಡುತ್ತಾರೆ.

ಈ ಕೂದಲನ್ನು ಕತ್ತರಿಸುವದರ ಮತ್ತು ಬೋಳಿಸುವದರ ಕುರಿತ ನನ್ನ ಸ್ಪಷ್ಟ ನಿರ್ಣಯ ಹೀಗಿದೆ —

ದೇವರಲ್ಲಿ ವಿಶ್ವಾಸ ಮಾಡುವ, ಸಂಸಾರ ನಶ್ವರ ಎಂದು ಒಪ್ಪುವ ಪ್ರತಿಯೊಬ್ಬನೂ ತಲೆಯ ಕೂದಲನ್ನು ಕತ್ತರಿಸದೇ, ಪೂರ್ಣವಾಗಿ ತೆಗೆಸಲೇ ಬೇಕು.

ತಲೆಗೂದಲನ್ನು ಬೋಳಿಸಿದಾಗ ಚನ್ನಾಗಿ ಕಾಣುವದಿಲ್ಲ ನಿಜ. ಅದರೆ, ಅದಕ್ಕಾಗಿಯೇ ಶಾಸ್ತ್ರ ಅದನ್ನು ನಮಗೆ ವಿಧಿಸಿದೆ ಎನ್ನುವದನ್ನು ನಾವು ಮರೆಯಬಾರದು.

ಧರ್ಮಶಾಸ್ತ್ರ ಇರುವದೇ ನಮ್ಮ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಪರೀಕ್ಷಿಸಲು.

ಪ್ರಾಣ ಕಂಠಕ್ಕೆ ಬಂದರೂ ಏಕಾದಶಿಯಂದು ಉಣ್ಣಬೇಡ, **“ಪ್ರಾಣೈಃ ಕಂಠಗತೈರಪಿ”,**

ಕಳ್ಳತನಮಾಡಿಯಾದರೂ ತಂದೆ ತಾಯಿ, ಹೆಂಡಿರು ಮಕ್ಕಳನ್ನು ಸಾಕು, “**ಅಪ್ಯಕಾರ್ಯಶತಂ ಕೃತ್ವಾ ಭರ್ತವ್ಯಾ ಮನುರಬ್ರವೀತ್**”

ಎಂಬಂತಹ ಮಾತುಗಳು ನಮ್ಮ ಧರ್ಮನಿಷ್ಠೆಯನ್ನು, ನಮ್ಮ ತತ್ವನಿಷ್ಠೆಯನ್ನು, ನಮ್ಮ ಭಗವದ್ಭಕ್ತಿಯನ್ನು ಪರೀಕ್ಷಿಸಲು ಹೊರಟದ್ದು.

ಹಾಗೆ

**ಬ್ರಹ್ಮಹತ್ಯಾದಿಪಾಪಾನಿ**
**ತತ್ಸಮಾನಿ ಬಹೂನ್ಯಪಿ ।**
**ಕೇಶಾನಾಶ್ರಿತ್ಯ ತಿಷ್ಠಂತಿ**
**ತಸ್ಮಾತ್ ಕೇಶಾನ್ ಪ್ರವಾಪಯೇತ್** [1] **।**

ಎಂದು ಗಂಡಸರು ತಲೆ ಮುಖಗಳ ಕೂದಲನ್ನು ಪೂರ್ಣವಾಗಿ ತೆಗೆಸಿಕೊಳ್ಳುವದು ಪಾಪ ಪರಿಹಾರಕ್ಕೆ ಕಾರಣ ಎಂದು ಶಾಸ್ತ್ರ ಸ್ಪಷ್ಟವಾಗಿ ತಿಳಿಸುತ್ತದೆ.

---

[1] ತೀರ್ಥಕ್ಷೌರದ ಲೇಖನದಲ್ಲಿ ಈ ಶ್ಲೋಕವನ್ನು ಪೂರ್ಣ ವಿವರಿಸುತ್ತೇನೆ.

ತಲೆ ಬೋಳಿಸಿಕೊಂಡಾಗ ಚನ್ನಾಗಿ ಕಾಣುವದಿಲ್ಲ ನಿಜ. ಆದರೆ, ಈ ದೇಹ ನಶ್ವರ, ಈ ದೇಹದ ಸುಖಕ್ಕಾಗಿ ನಾನು ಬದುಕುತ್ತಿರುವದು, ನನ್ನ ಅಂತರ್ಯಾಮಿಯಾದ ಹರಿಯನ್ನು ಕಾಣಲು ನಾನು ಬದುಕುತ್ತಿದ್ದೇನೆ, ಅದಕ್ಕೆ ಪ್ರತಿಬಂಧಕವಾದ ಪಾಪನಾಶಕ್ಕಾಗಿ ಕೂದಲನ್ನು ಬೋಳಿಸಿದ್ದೇನೆ ಎಂಬ ಎಚ್ಚರ ಕೊಡುವ ಶಕ್ತಿ ಈ ಕ್ಷೌರಕ್ಕಿದೆ.

ತಲೆಯ ಕೂದಲನ್ನು ತೆಗೆಸಿ, ಸ್ನಾನ ಮಾಡಿ ಹರಿಯ ಚರಣಕ್ಕೆರಗಿ ಬಿನ್ನವಿಸಿಕೊಳ್ಳಬೇಕು — **ಸ್ವಾಮಿ, ಈ ದೇಹವೇ ನನ್ನದಲ್ಲ, ಇದರ ಮೇಲೆ ಅಭಿಮಾನವನ್ನು ಬಿಡಿಸು ಒಡೆಯ, ಎಲ್ಲದರ ಮೇಲೆ ಅಭಿಮಾನವನ್ನು ನೀಗಿಸಿ ನಿನ್ನ ದರ್ಶನ ನೀಡು**” ಎಂದು.

ಈ ದೇಹ ಪಡೆದದ್ದು ಹರಿಯನ್ನು ಕಾಣಲಿಕ್ಕೆ. ಅವನು ಕಾಣುವದು ಅವನು ಪ್ರೀತನಾದಾಗ. ಅವನು ಪ್ರೀತನಾಗುವದು ಅವನ ಆಜ್ಞೆಯನ್ನು ಪರಿಪಾಲಿಸಿದಾಗ. ಶ್ರುತಿ ಸ್ಮೃತಿಗಳ ಮುಖಾಂತರ ನನ್ನ ಬದುಕಿನ ಸಂವಿಧಾನವನ್ನು ರೂಪಿಸಿದ್ದಾನೆ,

ಸ್ವಾಮಿ, ಅವನ ಆಜ್ಞೆಯಂತೆ ತಲೆಯ ಕೂದಲನ್ನು ತೆಗೆಸಿದ್ದೇನೆ. ಇದೂ ಸಹ ಭಗವತ್ಪೂಜೆಯೇ. ಹೀಗೆ, ಕೂದಲನ್ನು ತೆಗೆಸಿ ಹರಿಯ ಚರಣಕ್ಕೆರಗಿ ಕ್ಷೌರವನ್ನೂ ನಿನ್ನ ಪೂಜಾರೂಪ ಎಂದು ಬಿನ್ನವಿಸಿಕೊಳ್ಳುವ ಎತ್ತರವನ್ನು ಮುಟ್ಟುವದು ಶ್ರೇಷ್ಠವೋ, ಅಥವಾ ಅಶಾಸ್ತ್ರೀಯವಾಗಿ ಕೂದಲನ್ನು ಕತ್ತರಿಸಿ, ಮುಖಕ್ಷೌರವನ್ನು ಮಾಡಿಸಿಕೊಂಡು ಪಾಪಪ್ರಜ್ಞೆಯಲ್ಲಿರುವದೋ ನಮಗೆ ಬಿಟ್ಟದ್ದು.

## ಮುಖಕ್ಷೌರ-ಅರ್ಧಕ್ಷೌರಗಳು

ಇದೇ ಧ್ವನಿಯಲ್ಲಿ ನಾನು ಹೇಳುವ ಮಾತು — ಲೌಕಿಕದ ಕೆಲಸದ ಬಂಧನದಲ್ಲಿ ಸಿಲುಕಿರುವ ಇವತ್ತಿನ ಜನತೆಗೆ ಅರ್ಧಕ್ಷೌರ, ಮುಖಕ್ಷೌರಗಳು ಅನಿವಾರ್ಯವಾಗಿವೆ. ಶುದ್ಧ ವೈದಿಕ ಬ್ರಾಹ್ಮಣರಂತೆ ಲೌಕಿಕ ಕಂಪನಿಗಳಲ್ಲಿ ಕೆಲಸ ಮಾಡದ ಪರಿಸ್ಥಿತಿ ನಿರ್ಮಾಣವಾಗಿದೆ.

ಮತ್ತೂ, ಇದು ಕೇವಲ ಅನುಕೂಲಸಿಂಧುವಲ್ಲ. **ರೂಪವನ್ನು ಅವಲಂಬಿಸಿ ಬದುಕುವ ಜನರಿಗೆ ಕ್ಷೌರದಲ್ಲಿ ಶಾಸ್ತ್ರವೇ ವಿನಾಯಿತಿ ನೀಡಿದೆ.**

ನಾಟಕಗಳಲ್ಲಿ ನಟಿಸುವ ನಟರಿಗೆ, ರಾಜಾಸ್ಥಾನದಲ್ಲಿ ಕಾರ್ಯ ಮಾಡುವ ಜನರಿಗೆ ಕ್ಷೌರದ ವಿಧಿ-ನಿಷೇಧಗಳಲ್ಲಿ ಸಾಕಷ್ಟು ಬದಲಾವಣೆಯನ್ನು ಶಾಸ್ತ್ರ ತಿಳಿಸುತ್ತದೆ.

ಇವತ್ತಿನ ದಿವಸ ಅನೇಕ ಕಂಪನಿಗಳು ಮುಖಕ್ಷೌರವಿಲ್ಲದೇ ಬರಬಾರದು, ಇಂತಹುದೇ ಬಟ್ಟೆಯನ್ನು ಹಾಕಿಕೊಂಡು ಬರಬೇಕು ಇತ್ಯಾದಿ ನಿಯಮಗಳನ್ನು ಹಾಕಿರುತ್ತವೆ.

ಆ ರೀತಿ ನಿಯಮಗಳು ಇಲ್ಲದಾಗಲೂ ಅಲ್ಲಿನ ಪರಿಸರದ ದೃಷ್ಟಿಯಿಂದಲೂ ತಲೆಕೂದಲನ್ನು ಪೂರ್ಣ ತೆಗೆಸಲು ಸಾಧ್ಯವಿರುವದಿಲ್ಲ. ಅಂತಹವರು ಮುಖಕ್ಷೌರವನ್ನು ಮಾಡಿಕೊಳ್ಳಬಹುದು.

ಆ ರೀತಿಯಾದ ಕೆಲಸವೇ ಬೇಡ, ವೈದಿಕ ಜೀವನವನ್ನೇ ನಡೆಸಬೇಕು ಎನ್ನುವದು ಮತ್ತೊಂದು ವಾದ. ತಪ್ಪಿಲ್ಲ. ಆದರೆ ಅದು ಅಸಾಧ್ಯವಾಗಿದ್ದಾಗ ಮೇಲಿನ ವಿನಾಯತಿ ಇದ್ದೇ ಇದೆ.

ಆದರೆ, ವೃತ್ತಿಗಾಗಿ ವೈದಿಕ ಜೀವನವನ್ನು ಆರಿಸಿಕೊಂಡ ಪುರೋಹಿತರೂ, ಮತ್ತೊಬ್ಬರಿಗೆ ಶಾಸ್ತ್ರದ ಪಾಠ ಹೇಳುವ ಪಂಡಿತರೂ ಸಹ ಮೂಲಭೂತವಾದ ಕ್ಷೌರದ ನಿಯಮವನ್ನು ಪಾಲಿಸದೇ, ಮುಖ ಕ್ಷೌರ ಮಾಡಿಸಿಕೊಳ್ಳುವದು, ಅಧಿಕವಾದ ತಲೆಯ ಕೂದಲನ್ನು ಮಾತ್ರ ಕತ್ತರಿಸುವದು ಎಷ್ಟರ ಮಟ್ಟಿಗೆ ಸರಿ ಎಂದು ಅವರಿಗೆ ಅವರೇ ಕೇಳಿಕೊಳ್ಳಬೇಕಾದ ಪ್ರಶ್ನೆ.

“ಧರ್ಮೋ ರಕ್ಷತಿ ರಕ್ಷಿತಃ” ಎನ್ನುವದು  ಎಲ್ಲ ಪ್ರಶ್ನೆಗಳಿಗೂ ಉತ್ತರ. ಆ ಮಾತು ಅರ್ಥವಾದರೆ ಎಲ್ಲವೂ ಅರ್ಥವಾಗುತ್ತದೆ, ಕುತರ್ಕಗಳಿಗೆ ಅವಕಾಶವಿರುವದಿಲ್ಲ.

ಸಾಕ್ಷಾದ್ ಭಗವಂತನಿಂದ ಹರಿದು ಬಂದ ಸಚ್ಛಾಸ್ತ್ರದಲ್ಲಿ ನಂಬಿಕೆ ಕಳೆದುಕೊಂಡು ಲೌಕಿಕದ ಕಡೆಗೆ ಮುಖ ಮಾಡಿದ್ದಕ್ಕೇ ಇವತ್ತು ಬ್ರಾಹ್ಮಣರಿಗೆ ಎಲ್ಲ ತರಹದ ದುರವಸ್ಥೆ ಬಂದಿರುವದು ಎನ್ನುವದನ್ನು ಪಂಡಿತರು, ಪುರೋಹಿತರು ಎಂದಿಗೂ ಮರೆಯಬಾರದು.

ಆದರೆ, ಲೌಕಿಕ ಕೆಲಸವನ್ನು ಮಾಡುತ್ತ, ಲೋಕದ ಮಧ್ಯದಲ್ಲಿ ಬದುಕಬೇಕಾದ ಜನರಿಗೆ ಇವತ್ತು ಮುಖಕ್ಷೌರ ಅರ್ಧಕ್ಷೌರಗಳು ಅನಿವಾರ್ಯವಾಗಿವೆ.

ಅಂತಹ ಸಜ್ಜನರು, ದೇವರ ಕ್ಷಮೆಯನ್ನು ಕೇಳಿ ಹಾಗೆ ಮಾಡಿಸಿಕೊಳ್ಳತಕ್ಕದ್ದು.

ಲೌಕಿಕ ಕಾರ್ಯಗಳಿಂದ ನಿವೃತ್ತರಾದ ಬಳಿಕ ಶಿಖೆ, ಪೂರ್ಣಕ್ಷೌರವನ್ನು ಮಾಡಿಸಿಕೊಂಡಾಗ ದೇವರು ಮೆಚ್ಚುತ್ತಾನೆ, ಪ್ರಾಮಾಣಿಕತೆಗೆ ಫಲ ನೀಡುತ್ತಾನೆ.

## ನಿಯಮಗಳು

ಈ ಮುಖಕ್ಷೌರ ಅರ್ಧಕ್ಷೌರಕ್ಕೂ ಹಿಂದಿನ ಲೇಖನಗಳಲ್ಲಿ ತಿಳಿದಂತೆ ವಿಹಿತ-ನಿಷಿದ್ಧ ದಿವಸಗಳನ್ನು ಅನುಸರಿಸಲೇಬೇಕು.

ತಾವೇ ಮುಖಕ್ಷೌರ ಮಾಡಿಕೊಳ್ಳುವದೂ ಸಹ ಇವತ್ತಿನ ಮತ್ತೊಂದು ಅನಿವಾರ್ಯ ಆಚರಣೆ.

ಆ ರೀತಿ ಮುಖಕ್ಷೌರ ಮಾಡಿಕೊಂಡ ನಂತರ ಮನೆಯಲ್ಲಿನ ಯಾರನ್ನೂ ಮತ್ತು ಯಾವ ಪದಾರ್ಥವನ್ನೂ ಮುಟ್ಟದೆ ಸ್ನಾನ ಮಾಡಿ ಶುದ್ಧರಾಗಬೇಕು.

ಮತ್ತು, ಇದನ್ನು ಅನಿವಾರ್ಯತೆಯಿಂದ ಮಾಡುತ್ತಿದ್ದೇನೆ, ಇದು ಶಾಸ್ತ್ರವಿರುದ್ಧವಾದದ್ದು. “ಸ್ವಾಮಿ, ಕ್ಷಮಿಸು, ಶಾಸ್ತ್ರವಿಹಿತವಾದ ರೀತಿಯಲ್ಲಿ ಬದುಕುವ ಕ್ರಮವನ್ನು ಅನುಗ್ರಹಿಸು” ಎಂದು ದೇವರಲ್ಲಿ ಪ್ರಾರ್ಥಿಸುವ ಪ್ರಾಮಾಣಿಕ ಭಕ್ತಿಯಿರಬೇಕು.

## ವಿಕೃತ ಕ್ಷೌರ ಸಲ್ಲದು

ಈ ವಿನಾಯಿತಿ ಅತ್ಯಂತ ಅನಿವಾರ್ಯವಾದ ಮುಖ-ಕ್ಷೌರ, ಅರ್ಧಕ್ಷೌರಗಳಿಗೆ ಮಾತ್ರ. ವಿಕೃತ ಕ್ಷೌರಗಳಿಗಲ್ಲ.

ಎಲ್ಲ ಧರ್ಮಗಳಿಗೂ ಆಪದ್ಧರ್ಮವಿರುತ್ತದೆ. ಏಕಾದಶಿಯ ದಿವಸ ಉಪವಾಸ ಮಾಡಲು ಸಾಧ್ಯವೇ ಇಲ್ಲದವರು ಒಂದಷ್ಟು ಹಾಲನ್ನೋ ಹಣ್ಣನ್ನೋ ತಿನ್ನಬಹುದು ಎಂದು ಶಾಸ್ತ್ರವೇ ಹೇಳುತ್ತದೆ. ಹಾಗಂತ, ಆ ದಿವಸ ಉಪ್ಪಿಟ್ಟು, ಬೋಂಡ ಮಾಡಿಕೊಂಡು ತಿನ್ನುವದು, ಅನ್ನ ಪಾಯಸಗಳ ಅಡಿಗೆ ಮಾಡಿಕೊಳ್ಳುವದು ಸರ್ವಥಾ ಅಕ್ಷಮ್ಯ.

ಹಾಗೆಯೇ ಗದ್ದದ ಮೇಲೆ ಮೇತ್ರ ಗಡ್ಡ ಉಳಿಸುವದು,(French beard) ಗಡ್ಡವನ್ನು ಅಲ್ಲಲ್ಲಿ ಮಾತ್ರ ತೆಗೆಸುವದು, ಏನೇನೋ ವಿಕಾರವಾಗಿ ತಲೆಯ ಕೂದಲನ್ನು ಕತ್ತರಿಸುವದು ಸರ್ವಥಾ ಶಾಸ್ತ್ರಕ್ಕೆ ವಿರುದ್ಧವಾದದ್ದು.

ಇಂತಹ ವಿಷಯಗಳಲ್ಲಿ ಒಟ್ಟಾರೆ ತಿಳಿಯಬೇಕಾದ ವಿಷಯವಿಷ್ಟು —  ಎಷ್ಟೋ ಬಾರಿ ಧರ್ಮಶಾಸ್ತ್ರ ಹೇಳಿದ ಎಲ್ಲವನ್ನೂ ಆಚರಣೆ ಮಾಡಲು ನಮಗೆ ಸಾಧ್ಯವಾಗುವದಿಲ್ಲ. ದೇಶ-ಕಾಲ-ಸಂದರ್ಭಗಳು ಅದಕ್ಕೆ ಅನುಕೂಲವಾಗಿರುವದಿಲ್ಲ.

ಹೀಗೆ ಯಾವುದೋ ಅನಿವಾರ್ಯತೆಯಿಂದ ಮಾಡಿದ್ದನ್ನು ಸಮರ್ಥಿಸಿಕೊಳ್ಳುವ ತಪ್ಪನ್ನು ಮನುಷ್ಯ ಮಾಡಬಾರದು.

ನಾನು ಮಾಡಿದ್ದೇ ಸರಿ, ಅವನ್ನೇನೂ ಪಾಲನೆ ಮಾಡಬೇಕಾಗಿಲ್ಲ ಎಂದು ಧರ್ಮಶಾಸ್ತ್ರವನ್ನು ನಿಂದಿಸಬಾರದು.  ಅದು ಮತ್ತೊಂದು ಮಹತ್ತರ ಪಾಪ.

‘ತಾನು ಮಾಡಿದ್ದೇನೆ ಎಂಬ ಕಾರಣಕ್ಕೆ ಸರಿ’ ಎಂದು ವಾದಿಸುವ ಅಹಂಕಾರಿಯಾಗದೇ, ‘ತಪ್ಪು ಮಾಡುತ್ತಿದ್ದೇನೆ, ಆದಷ್ಟು ಬೇಗ ತಿದ್ದುಕೊಳ್ಳಬೇಕು’ ಎಂಬ ವಿನಯ ನಮ್ಮಲ್ಲಿ ಮನೆ ಮಾಡಬೇಕು.

— ವಿಷ್ಣುದಾಸ ನಾಗೇಂದ್ರಾಚಾರ್ಯ

## ಕ್ಷೌರದ ಕುರಿತ ಇತರ ಲೇಖನಗಳು

ಕೆಳಗಿನ ಯಾವುದೇ ಶಬ್ದವನ್ನು ಒತ್ತಿದರೂ ಅದಕ್ಕೆ ಸಂಬಂಧಪಟ್ಟ ಪುಟ ತೆರೆದುಕೊಳ್ಳುತ್ತದೆ.

### ಕ್ಷೌರಕ್ಕೆ ನಿಷಿದ್ಧಕಾಲಗಳು

**ಯಾವ ದಿವಸಗಳಲ್ಲಿ, ಯಾವ ಸಂದರ್ಭಗಳಲ್ಲಿ ಕ್ಷೌರವನ್ನು ಮಾಡಿಸಿಕೊಳ್ಳಬಾರದು, ಮಾಡಿಸಿಕೊಂಡರೆ ಏನಾಗುತ್ತದೆ ಎಂಬ ವಿಷಯದ ಕುರಿತ ವಿವರ ಈ ಲೇಖನದಲ್ಲಿದೆ.**

vishwanandini.com/fullarticle.php?serialnumber=VNA281

---

### ಕ್ಷೌರದ ವಾರಫಲಗಳು

**ಯಾವ ವಾರದಂದು ಕ್ಷೌರ ಮಾಡಿಸಿಕೊಂಡರೆ ಯಾವ ಯಾವ ಫಲಗಳು ಮತ್ತು ಎರಡು ಕ್ಷೌರಗಳ ಮಧ್ಯದಲ್ಲಿ ಎಷ್ಟು ಅಂತರವಿರಬೇಕು ಎನ್ನುವದರ ವಿವರಣೆ ಈ ಲೇಖನದಲ್ಲಿದೆ.**

vishwanandini.com/fullarticle.php?serialnumber=VNA282

## ಪರಿಶುದ್ಧವಾದ ಕ್ಷೌರದ ಕ್ರಮ

**ರ್ಥಕ ಆಯುಷ್ಯ ದೊರೆಯುತ್ತದೆ. ಆ ಪರಿಶುದ್ಧ ಕ್ರಮದ ಕುರಿತ ವಿವರಣೆ ಇಲ್ಲಿದೆ. ಕ್ಷೌರದ ನಂತರ ಮಾಡಬೇಕಾದ ಆಚರಣೆಯ ನಿರೂಪಣೆಯೊಂದಿಗೆ.**

http://vishwanandini.com/fullarticle.php?serialnumber=VNA283

---

## ಕ್ಷೌರಿಕ ಮತ್ತು ನಮ್ಮ ಸಂಸ್ಕೃತಿ

**ಕೂದಲು ತೆಗೆಯುವದೊಂದೇ ಕ್ಷೌರಿಕನ ವೃತ್ತಿಯಲ್ಲ. ಅಲಂಕಾರ ಮಾಡುವದರಿಂದ ಹಿಡಿದು ಶಸ್ತ್ರಚಿಕಿತ್ಸೆಯಂತಹ ಮಹತ್ತ್ವದ ಕಾರ್ಯವನ್ನು ಮಾಡುವಷ್ಟು ನಮ್ಮ ಹಿಂದಿನ ಕ್ಷೌರಿಕರು ಪಳಗಿರುತ್ತಿದ್ದರು. ಅದರ ಕುರಿತು, ಕ್ಷೌರಿಕನ ಮಡಿ ಮೈಲಿಗೆಗಳ ಕುರಿತು, ಸಮಾಜದಲ್ಲಿ ಕ್ಷೌರಿಕನ ಸ್ಥಾನಮಾನಗಳ ಕುರಿತು, ಕ್ಷೌರಿಕನಿಗೂ ನಮಗೂ ಇರಬೇಕಾದ ಬಾಂಧವ್ಯದ ಕುರಿತು ಇಲ್ಲಿ ಚಿಂತನೆಯಿದೆ. ಶ್ರೀಕೃಷ್ಣ ತನ್ನ ಕ್ಷೌರಿಕನ ಮೇಲೆ ಮಾಡಿದ ಪರಮಾನುಗ್ರಹದ ಚಿಂತನೆಯೊಂದಿಗೆ.**

http://vishwanandini.com/fullarticle.php?serialnumber=VNA284

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491